ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 87/2016

(ಫ್ರಾಸಾ-1 ಚಾಸಾ-2 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 09.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಕೇಶ್ |
| ತಂದೆಯ ಹೆಸರು | - | ಶಂಕರ್ ಟಿ. ಆರ್. |
| ವಯಸ್ಸು | - | 31 ವರ್ಷ, |
| ಉದ್ಯೋಗ | - | ವ್ಯಾಪಾರ |
| ವಾಸ | - | ಬಾಗಲಗುಂಟೆ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮುನಿವೆಂಕಟಪ್ಪ ಈತನ ಪರಿಚಯ ಇದೆ. ಅವರು ಈಗ 1-2 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ಅವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ಈಗ ತೋರಿಸಲಾದ ದಾಖಲೆ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಮಹಜರ್ ಇದ್ದು ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಗುರ್ತಿಸಲಾಯಿತು. ಡಿಸೆಂಬರ್ 2015 ರಲ್ಲಿ ಚಿಕ್ಕಸಂದ್ರ ಗ್ರಾಮದಲ್ಲಿ ಚಾಸಾ-1 ಇವರ ಜಮೀನಿನಲ್ಲಿ ಸ್ಥಳ ಮಹಜರ್ ಅನ್ನು ಮಾಡಿದ್ದಾರೆ. ಆಗ ನಾನು ನಿಪಿ-1 ಕ್ಕೆ ಸಹಿ ಮಾಡಿದ್ದೇನೆ. ಚಾಸಾ-1 ಹಾಜರಿದ್ದು ಅವರು ಗಲಾಟೆ ಆದ ಸ್ಥಳವನ್ನು ತೋರಿಸಿದರು. ಪೋಲಿಸರು ಆ ಸ್ಥಳದ ಮಹಜರ್ ಮಾಡಿದರು. ಅಲ್ಲಿ ಅಂಬೇಡ್ಕರ್ ರವರ ಭಾವಚಿತ್ರದ ಬೋರ್ಡ್ ಇತ್ತು. ಅದು ಬಿದ್ದಿತ್ತು. ಅದನ್ನು ಪೋಲಿಸರು ತಮ್ಮ ವಶಕ್ಕೆ ತೆಗೆದುಕೊಂಡರು. ಮಹಜರ್ ಮಾಡಿದಾಗ ಸಮಯ ಮಧ್ಯಾಹ್ಣ ಸುಮಾರು 2.30 ಅಥವಾ 03.00 ಘಂಟೆಯಾಗಿರಬಹುದು. ಮಹಜರ್ ಗೆ ಚಾಸಾ-1 ಮತ್ತು ಚಾಸಾ-3 ಸಹಿ ಮಾಡಿದ್ದಾರೆ. ಈಗ ತೋರಿಸಿದ ಛಾಯಚಿತ್ರದಲ್ಲಿರುವ ಬೋರ್ಡ್ ಘಟನಾ ಸ್ಥಳದಲ್ಲಿ ಬಿದ್ದಿತ್ತು. ಸದರಿ ಛಾಯಚಿತ್ರವನ್ನು ನಿಪಿ-2 ಎಂದು ಗುರ್ತಿಸಲಾಯಿತು. ಮಹಜರ್ ಸಮಯದಲ್ಲಿ ಫೋಟೊ ತೆಗೆದಿದ್ದಾರೆ ಮತ್ತು ಅವು ಈಗ ತೋರಿಸಿದ್ದು ಇವೆ. ಸದರಿ ನಾಲ್ಕು ಫೋಟೋಗಳನ್ನು

ಒಟ್ಟಾಗಿ ನಿಪಿ-3 ಎಂದು ಗುರ್ತಿಸಲಾಯಿತು. ಸದರಿ ಫೋಟೋಗಳಲ್ಲಿ ಕುತ್ತಿಗೆ ಟವೆಲ್ ಹಾಕಿದ ವ್ಯಕ್ತಿ ಚಾಸಾ-1 ಇದ್ದಾರೆ ಮತ್ತು ಕರಿ ಜರ್ಕಿನ್ ಹಾಕಿದ ವ್ಯಕ್ತಿ ನಾನು ಇದ್ದೇನೆ. ಚಾಸಾ-3 ಸಹ ಮಹಜರ್ ಗೆ ಸಹಿ ಮಾಡಿದ್ದಾರೆ.

**ಪಾಟೀ ಸವಾಲು:** ಆರೋಪಿತರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು